## ನುಡಿಮಲ್ಲಿಗೆ

ಮದುವೆ ಒಂದು ಬೋನಿನಂತೆ. ಹೊರಗಿರುವ ಪಕ್ಷಿಗಳು ಒಳಗೆ ಬರಲು ಹಾತೊರೆಯುತ್ತವೆ; ಒಳಗಿರುವ ಪಕ್ಷಿಗಳು ಹೊರಗೆ ಬರಲು ಸಮಾನವಾಗಿ ಹಾತೊರೆಯುತ್ತವೆ.

■ ಮಾಂಟೆಗೊ

## ಕಹಿ ಮಾತ್ರೆಗಳು



ಸತ್ಸಂಗದ ಸಮಯದಲ್ಲಿ ಶಿಷ್ಯರು ಮಹಾವೀರ ಸ್ವಾಮಿಯನ್ನು ಕುರಿತು ''ಪ್ರಭುವೇ, ಇಲ್ಲಿ ಹೆಜ್ಜೆ-ಹೆಜ್ಜೆಗೂ ಪಾಪಗಳಾಗುತ್ತವೆ. ಶ್ವಾಸ ತೆಗೆದುಕೊಳ್ಳುವಾಗಲೂ ಹಿಂಸೆಯಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನಾವು ಹೇಗೆ ಜೀವಿಸಬೇಕೆಂಬುದನ್ನು ನೀವೇ ತಿಳಿಸಿರಿ. ಪಾಪವಾಗದಿರುವಂತೆ ನಾವು ಹೇಗೆ ನಡೆಯೋಣ? ಹೇಗೆ ಕುಳಿತುಕೊಳ್ಳೋಣ, ಹೇಗೆ ತಿನ್ನೋಣ? ಹೇಗೆ ಮಲಗೋಣ? ಹೇಗೆ ನಿಲ್ಲೋಣ? ಪಾಪಬಂಧವಾಗದಂತೆ ಹೇಗೆ ಮಾಡೋಣ?'' ಎಂದು ಕೇಳಿದರು. ಮಹಾವೀರರು-''ಎಚ್ಚರದಿಂದ ಜೀವಿಸು, ವಿವೇಕದಿಂದ ನಡೆ, ಎಚ್ಚರದಿಂದ ಕುಳಿತುಕೊ, ಏನಾದರೂ ಮಾಡು-ಜಾಗೃತವಾಗಿರಲು ಮರೆಯಬೇಡ. ಪ್ರಮಾದವೇ ಮೃತ್ಯು. ಜಾಗೃತಿಯೇ ಜೀವನ.''

-ಮುನಿಶ್ರೀ ತರುಣಸಾಗರ್ ಜೀ

## ಡಿ.ವಿ.ಜಿ. ಚಿಂತನೆ-201



ಸ್ವಾತಂತ್ರ್ಯವೆಂಬ ಫಲ ಈಗ ನಮಗೆ ಕೈವಶವಾಗಿದ್ದರೂ ಅದು ಇನ್ನೂ ಪಕ್ವವಾಗಬೇಕಾಗಿದೆ. ಅದು ಮಾಗಲು ಬೇಕಾದ ಕಾವನ್ನು ಒದಗಿಸುವುದು ರಾಷ್ಟ್ರಕ ಮಹಾಜನರ ಮೇಲಿರುವ ಕರ್ತವ್ಯಭಾರ. ಪ್ರಜಾಜನರು ರಾಜ್ಯವು ತನ್ನ ಸ್ವಂತಕಾರ್ಯವೆಂದು ಭಾವಿಸಿ, ಅದರ ಜವಾಬ್ದಾರಿಯ ವಿಷಯದಲ್ಲಿ ಎಚ್ಚರಗೊಂಡಿರಬೇಕೆಂಬುದು ಪ್ರಜಾರಾಜ್ಯಕ್ಕಿರುವ ಪ್ರಥಮ ನಿಂಬಂಧನೆ. ಆ ಮನೋಭಾವ ನಮ್ಮ ದೇಶದಲ್ಲಿ ಇನ್ನೂ ಜನಕ್ಕೆ ಬಂದಿಲ್ಲ. ಜನದ ಮನಸ್ಸು ಬ್ರಿಟಿಷರ ಕಾಲದಲ್ಲಿದ್ದಂತೆಯೇ- ಸಾವಿರಾರು ವರ್ಷಗಳ ಹಿಂದಿನಿಂದ ಇದ್ದಂತೆಯೇ- ಇನ್ನೂ ಉಳಿದುಕೊಂಡಿದೆ. ''ಸರಕಾರವೆಂಬುದು ನಾವಲ್ಲದೆ ಬೇರೆ ಇನ್ನಾರೋ ಹೊರಬೇಕಾದ ಹೊಣೆ. ಅದಕ್ಕೂ ನಮಗೂ ಹೆಚ್ಚಿನ ಸಂಬಂಧವಿಲ್ಲ, ನಮ್ಮ ಕೆಲಸವೇನಿದ್ದರೂ ಗೊಣಗಾಡುವುದು, ದಂಡ ತೆರುವುದು ಇಷ್ಟೇ. ಮಿಕ್ಕದ್ದನ್ನು ಇನ್ನಾರೋ ನಡೆಸಿಕೊಂಡು ಹೋಗಲಿ. ಅವರು ಚೆನ್ನಾಗಿ ನಡೆಸದಿದ್ದರೆ ಅದು ನಮ್ಮ ದುರದೃಷ್ಟ, ದುರ್ದೈವ''- ಹೀಗೆಂಬುದು ಅನೇಕ ಶತವರ್ಷಗಳಿಂದ ರೂಢಿಯಾಗಿರುವ ಮನೋವೃತ್ತಿ. ಎಂದಿನವರೆಗೆ ನಮ್ಮ ಜನರ ಮನೋವೃತ್ತಿ ಹಾಗಿರುತ್ತದೋ ಅಂದಿನವರೆಗೂ ಸ್ವಾತಂತ್ರ್ಯದ ಕಾಯಿ ನಮ್ಮ ಬಾಯಿಗೆ ಮಾಗಿದ ಹಣ್ಣಾಗದು.

ಡಿ.ವಿ.ಗುಂಡಪ್ಪ, (ಕೃತಿ: ''ರಾಜಕೀಯ ಪ್ರಸಂಗಗಳು'', ಡಿವಿಜಿ ಕೃತಿಶ್ರೇಣಿ-5)

## ರಾಜಕಾರಣಿಗಳು-ಅಧಿಕಾರಿಗಳ ದಿನಚರಿ

| | | |
|---|---|---|
| ಸಂಸದರು | ಎಸ್.ಪಿ.ಮುದ್ದ ಹನುಮೇಗೌಡ | ದೆಹಲಿ |
| ಶಾಸಕರು | ಡಾ.ಎಸ್.ರಫೀಕ್ ಅಹಮದ್ | ತುಮಕೂರು |
| ಶಾಸಕರು | ಬಿ.ಸುರೇಶ್ ಗೌಡ | ಕ್ಷೇತ್ರ ಪ್ರವಾಸ |
| ಜಿಲ್ಲಾಧಿಕಾರಿ | ಕೆ.ಪಿ.ಮೋಹನ್‌ರಾಜ್ | ಕೇಂದ್ರಸ್ಥಾನ |
| ಎಸ್.ಪಿ. | ಡಾ.ದಿವ್ಯಾ ಗೋಪಿನಾಥ್ | ಕೇಂದ್ರಸ್ಥಾನ |
| ಸಿ.ಇ.ಒ. | ಅನ್ನಿಸ್ ಕಣ್ಮಣಿ ಜಾಯ್ | ಕೇಂದ್ರಸ್ಥಾನ |
| ತಹಸೀಲ್ದಾರ್ | ರಂಗೇಗೌಡ | ಕೇಂದ್ರಸ್ಥಾನ |

## ಷೇರು ಪೇಟೆ

ಸೆನ್ಸೆಕ್ಸ್ :34,503.49 ▲ 70.42
ನಿಫ್ಟಿ :10,651.20 ▲ 19.00

## ವಿನಿಮಯ ದರ

| | | |
|---|---|---|
| $ ಡಾಲರ್ | : | 63.71 |
| £ ಪೌಂಡ್ | : | 86.24 |
| € ಯೂರೋ | : | 76.72 |
| ¥ ಯೆನ್ | : | 0.57 |

## ದಿನ ಭವಿಷ್ಯ

ದಿನಾಂಕ: 13-01-2018 ಶನಿವಾರ
ತಿಥಿ: ದ್ವಾದಶಿ ನಕ್ಷತ್ರ:ಅನೂರಾಧ
ಅದೃಷ್ಟ ಸಂಖ್ಯೆ: 6
ಇಂದಿನ ವಿಶೇಷ
ಲೋಹರಿ

| | |
|---|---|
| ಮೇಷ | :ವ್ಯಥೆ |
| ವೃಷಭ | :ವ್ಯಕ್ತಿಭೇಟಿ |
| ಮಿಥುನ | : ಕಾರಣ ಲಭ್ಯ |
| ಕಟಕ | : ಮನರಂಜನೆ |
| ಸಿಂಹ | :ವಾಹನ ಸುಖ |
| ಕನ್ಯಾ | : ಶುಭ ಸಮಾಚಾರ |
| ತುಲಾ | : ಆರ್ಥಿಕ ಸಹಾಯ |
| ವೃಶ್ಚಿಕ | : ಸಫಲತೆ |
| ಧನಸ್ಸು | :ಚಂಚಲತೆ |
| ಮಕರ | :ವ್ಯಕ್ತಿ ಸಹಾಯ |
| ಕುಂಭ | :ಸಮಯಪ್ರಜ್ಞೆ |
| ಮೀನ | : ಮಹತ್ವದ ತೀರ್ಪು |

## ಇಂದಿನಿಂದ ಸಂಕ್ರಾಂತಿ ನಾಟಕೋತ್ಸವ

ತುಮಕೂರು

ಇಲ್ಲಿನ ಸಿರಾಗೇಟ್‌ನ ಚಾಮುಂಡೇಶ್ವರಿ ನಗರದ ನಾಟಕಮನೆ ಸಾಂಸ್ಕೃತಿಕ ಸಮುಚ್ಚಯ ಆವರಣದಲ್ಲಿ ಜನವರಿ 13 ರಿಂದ 15 ರವರೆಗೆ ಮೂರು ದಿನಗಳ ಕಾಲ ಸಂಕ್ರಾಂತಿ ನಾಟಕೋತ್ಸವವನ್ನು ಏರ್ಪಡಿಸಲಾಗಿದೆ.

ಜನವರಿ 13 ರಂದು ಸಂಜೆ 6 ಗಂಟೆಗೆ ನಾಟಕೋತ್ಸವದ ಉದ್ಘಾಟನಾ ಸಮಾರಂಭ ಜರುಗಲಿದ್ದು, ದೇಸೀ ಪ್ರಸಿದ್ದಿಯ ರಂಗ ನಿರ್ದೇಶಕ ಉಡುಪಿಯ ಗೋಪಾಲಕೃಷ್ಣ ನಾಯರಿ ಪ್ರಾಸ್ತಾವಿಕ ನುಡಿಗಳನ್ನಾಡುವರು. ಮಹಾನಗರಪಾಲಿಕೆ ಸದಸ್ಯ ಮಹೇಶ್ ಎನ್ ಅಧ್ಯಕ್ಷತೆ ವಹಿಸುವರು. ರಂಗನಿರ್ದೇಶಕ ಭೀಮ್‌ಸೇನ್ ಚಾಲನೆ ನೀಡುವರು. ಮುಖ್ಯ ಅತಿಥಿಗಳಾಗಿ ಚಾಮುಂಡೇಶ್ವರಿನಗರದ ಚಂದನ ನಾಗರೀಕ ವೇದಿಕೆ ಅಧ್ಯಕ್ಷ ಡಿ.ವಿ.ಶೇಷಾಚಲ, ರಂಗಕಲಾವಿದ ಕುಂಭೀನರಸಯ್ಯ ಅವರು ಉಪಸ್ಥಿತರಿರುವರು. ನಂತರ ಶಿವು ಹೊನ್ನಿಗನಹಳ್ಳಿ ಅವರ ನಿರ್ದೇಶನದಲ್ಲಿ ಕರ್ಣಭಾರ ಮತ್ತು ಊರುಭಂಗ, ಜನವರಿ 14 ರಂದು ಸಂಜೆ 6 ಗಂಟೆಗೆ ಕೌತಮಾರನಹಳ್ಳಿ ಕಾಂತರಾಜು ಅವರ ನಿರ್ದೇಶನದಲ್ಲಿ ದೆವ್ವದ ಮನೆ, ರವಿಶಂಕರ ರಂಗಾಯಣ ಅವರ ನಿರ್ದೇಶನದಲ್ಲಿ ಸಾಯೋಆಟ, ಜನವರಿ 15 ರಂದು ಸಂಜೆ 6 ಗಂಟೆಗೆ ಕೌತಮಾರನಹಳ್ಳಿಯ ಕಾಂತರಾಜು ಅವರ ನಿರ್ದೇಶನದಲ್ಲಿ ಸಿದ್ದಮಾದೇಶ, ತೆರೆಗಳು ಎಂಬ ನಾಟಕಗಳು ಪ್ರದರ್ಶನಗೊಳ್ಳಲಿವೆ.

# ರೈತರ ನೆರವಿಗಾಗಿ ರಾಗಿ ಖರೀದಿ ಕೇಂದ್ರ ಪ್ರಾರಂಭ

ತುರುವೇಕೆರೆ



ರೈತ ತಾನು ಬೆಳೆದ ಕೃಷಿ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಬೆಲೆಯನ್ನು ಒದಗಿಸುವ ದಿಸೆಯಲ್ಲಿ ಸರ್ಕಾರ ರೈತರ ನೆರವಿಗೆ ಧಾವಿಸಿ ತಾಲ್ಲೂಕು ಕೇಂದ್ರದಲ್ಲಿ ರಾಗಿ ಖರೀದಿ ಕೇಂದ್ರ ತೆರೆದಿದ್ದು, ಕೃಷಿಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಶಾಸಕ ಎಂ.ಟಿ.ಕೃಷ್ಣಪ್ಪ ತಿಳಿಸಿದರು

ಪಟ್ಟಣದ ಕೃಷಿ ಮಾರುಕಟ್ಟೆ ಪ್ರಾಂಗಣದಲ್ಲಿ ಬುಧುವಾರದಿಂದ ಆಹಾರ ಮತ್ತು ನಾಗರಿಕ ಇಲಾಖೆ, ಜಿಲ್ಲಾಡಳಿತದ ವತಿಯಿಂದ ಆರಂಭಗೊಂಡ ರಾಗಿ ಖರೀದಿ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಳೆದ 3 ವರ್ಷಗಳಿಂದ ಕಾಡಿದ ಸತತ ಬರದಿಂದ ಪ್ರಸ್ತುತ ಸಾಲಿನಲ್ಲಿ ಬಚಾವ್ ಆದ ತಾಲ್ಲೂಕಿನ ರೈತರು ಸಂಮೃದ್ದ ರಾಗಿ ಬೆಳೆಯನ್ನು ಬೆಳೆದಿದ್ದು, ಇದೇ ವೇಳೆ ಮಾರುಕಟ್ಟೆ ಮೌಲ್ಯವೂ ಕುಸಿದಿತ್ತು. ಈ ಸಂಕಷ್ಟದ ವೇಳೆ ಖಾಸಗಿ ವರ್ತಕರಿಗೆ ಅವರ ಕೇಳಿದ ದರಕ್ಕೆ ರಾಗಿಯನ್ನು ಮಾರುವ ಅನಿವಾರ್ಯತೆ ಇತ್ತು. ಇದೀಗ ರಾಜ್ಯ ಸರ್ಕಾರದ ಪ್ರೋತ್ಸಾಹ ಧನವೂ ಸೇರಿದಂತೆ ಪ್ರತಿ ಕ್ವಿಂಟಾಲ್‌ಗೆ 2300 ರೂಗೆ ಖರೀದಿ ಆರಂಬಿಸಿದೆ. ಪ್ರಸ್ತುತ ಕೃಷಿ ಉತ್ಪಾದನಾ ವೆಚ್ಚ ಹೆಚ್ಚಿದ್ದು, ಸರ್ಕಾರ ಇದನ್ನು ಮನಗಂಡು ಮತ್ತಷ್ಟು ಹೆಚ್ಚು ಬೆಂಬಲ ಬೆಲೆಯನ್ನು ಘೋಷಿಸಿ ಕ್ವಿಂಟಾಲ್‌ಗೆ ಕನಿಷ್ಠ 3000 ರೂಗಳಾದರೂ ನೀಡಿದರೆ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ. ತಾಲ್ಲೂಕಿನ ಕೃಷಿಕರು ತಮ್ಮ ಪಹಣಿಯೊಂದಿಗೆ ಆಗಮಿಸಿ ನೊಂದಾಯಿಸಿಕೊಂಡು ಅವರಿಗೆ ನಿಗಧಿ ಪಡಿಸಿದ ದಿನಾಂಕದಂದು ಖರೀದಿ ಕೇಂದ್ರಕ್ಕೆ ರಾಗಿಯನ್ನು ನೀಡಬಹುದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎಪಿಎಂಸಿ ಅಧ್ಯಕ್ಷರಾದ ನಾಗರಾಜು ಮಾತನಾಡಿ ರಾಗಿ ಖರೀದಿ ಕೇಂದ್ರ ರಾಗಿ ಪಡೆಯುವಲ್ಲಿ ಕೆಲವು ಮಾನದಂಡವನ್ನು ರೂಪಿಸಿದ್ದು, ಇದಕ್ಕೆ ಅನುಗುಣವಾಗಿ ಒಬ್ಬ ಕೃಷಿಕ ಗರಿಷ್ಠ 75 ಕ್ವಿಂಟಾಲ್ ವರಗೆ ರಾಗಿ ನೀಡಬಹುದು. 50 ಕೆಜಿ ಚೀಲದಲ್ಲಿ ಮಾತ್ರ ತರಬೇಕು, ಆದಷ್ಟು ಗುಣಮಟ್ಟದ ರಾಗಿಯನ್ನು ತಂದು ಖರೀದಿ ಕೇಂದ್ರಕ್ಕೆ ಬಿಡುವುದರೊಂದಿಗೆ ಉತ್ತಮ ಮಾರುಕಟ್ಟೆಯ ಬೆಲೆಯನ್ನು ಪಡೆಯಬಹುದು.

ಸಮಾರಂಭದಲ್ಲಿ ಇಲಾಖೆಯ ಉಪನಿರ್ದೇಶಕ ಮಂಟೆಸ್ವಾಮಿ, ಆಹಾರ ನೀರೀಕ್ಷ ಕಿರಣ್‌ಕುಮಾರ್, ವ್ಯವಸ್ಥಾಪಕ ಚಂದ್ರಶೇಖರ್, ಮಾರುಕಟ್ಟೆ ಉಪಾಧ್ಯಕ್ಷೆ ಛಾಯಾಶಂಕರೇಗೌಡ, ಸದಸ್ಯರಾದ ವಿಜಯೇಂದ್ರ, ರೇಣುಕಪ್ಪ, ರಾಜುಬುಗುಡನಹಳ್ಳಿ, ರಾಮಚಂದ್ರು, ಶಂಕರೇಗೌಡ, ಶಂಕರಪ್ಪ, ಮಂಜಣ್ಣ ಸೇರಿದಂತೆ ಉಪಸ್ಥಿತರಿದ್ದರು.

## ಜನವರಿ 17, 18ರಂದು ನೂಪುರಚರಣ ನೃತ್ಯೋತ್ಸವ

ತುಮಕೂರು

ಇಲ್ಲಿನ ಡಾ.ಗುಬ್ಬಿವೀರಣ್ಣ ರಂಗಮಂದಿರದಲ್ಲಿ ಜನವರಿ 17 ಮತ್ತು 18 ರಂದು ನೂಪುರಚರಣ ನೃತ್ಯೋತ್ಸವ ಸಮಾರಂಭವನ್ನು ಏರ್ಪಡಿಸಲಾಗಿದೆ.

ತುಮಕೂರಿನ ಶ್ರೀ ರಾಜರಾಜೇಶ್ವರಿ ನೃತ್ಯ ಕಲಾಮಂದಿರ ಟ್ರಸ್ಟ್ ನವದೆಹಲಿಯ ಸಂಸ್ಕೃತಿ ಸಚಿವಾಲಯ ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವುಗಳ ಜಂಟಿ ಆಶ್ರಯದಲ್ಲಿ ಆಯೋಜಿತಗೊಂಡಿರುವ ಈ ಸಮಾರಂಭದ ಉದ್ಘಾಟನೆಯು ಜನವರಿ 17 ರಂದು ಸಂಜೆ 6 ಗಂಟೆಗೆ ಜರುಗಲಿದ್ದು, ನಾಟ್ಯಶ್ರೀ ಕೆ.ಎಂ.ರಾಮನ್, ವಿಧುಷಿ ದೇವಕಿ ರಾಮನ್ ಅವರು ದಿವ್ಯಸಾನಿಧ್ಯ ವಹಿಸಲಿದ್ದು, ಜಿಲ್ಲಾಧಿಕಾರಿ ಕೆ.ಪಿ.ಮೋಹನ್‌ರಾಜ್ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಬೆಂಗಳೂರು ಕೆ.ಐ.ಎ.ಡಿ.ಬಿ. ಜಂಟಿ ನಿರ್ದೇಶಕ ಸಿ.ಟಿ.ಮುದ್ದುಕುಮಾರ್ ಉಪಸ್ಥಿತರಿರುವರು. ಸಾಹಿತಿ ಡಾ.ಕವಿತಾಕೃಷ್ಣ ಅಧ್ಯಕ್ಷತೆ ವಹಿಸುವರು. ಇದೇ ಸಂದರ್ಭದಲ್ಲಿ ಶಿರಾ ತಾಲ್ಲೂಕಿನ ತಬಲ ಹಾಗೂ ಸುಗಮ ಸಂಗೀತ ವಿದ್ವಾಂಸ ವಿದ್ವಾನ್ ಕೆ.ಕಾಂತರಾಜು ಅವರನ್ನು ಸನ್ಮಾನಿಸಲಾಗುವುದು. ತುಮಕೂರಿನ ಶ್ರೀ ರಾಜರಾಜೇಶ್ವರಿ ನೃತ್ಯ ಕಲಾಮಂದಿರ ಟ್ರಸ್ಟ್‌ನ ಜೂನಿಯರ್ ಮತ್ತು ಸೀನಿಯರ್ ವಿದ್ಯಾರ್ಥಿನಿಯರಿಂದ ಭರತನಾಟ್ಯ ಕಾರ್ಯಕ್ರಮ ನಡೆಯಲಿದೆ.

ಜನವರಿ 18 ರಂದು ಸಂಜೆ 6 ಗಂಟೆಗೆ ಭರತನಾಟ್ಯ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಬೆಂಗಳೂರು ಶಿವಶಕ್ತಿ ನೃತ್ಯ ಶಾಲೆಯ ಗುಣವತಿ ಪ್ರಭಾಕರ್ ಮತ್ತು ಶಿಷ್ಯ ವೃಂದದಿಂದ ಭರತನಾಟ್ಯ ಮತ್ತು ಶ್ರೀ ರಾಜರಾಜೇಶ್ವರಿ ನೃತ್ಯ ಕಲಾಮಂದಿರ ಟ್ರಸ್ಟ್ ಜೂನಿಯರ್ ಮತ್ತು ಸೀನಿಯರ್ ವಿದ್ಯಾರ್ಥಿನಿಯರಿಂದ ಶ್ರೀ ಬಾಲಕೃಷ್ಣಲೀಲೆ ಕುರಿತು ನೃತ್ಯರೂಪಕ ನಡೆಯಲಿದೆ.

## ಅವಧಿ ವಿಸ್ತರಣೆ

ತುಮಕೂರು: ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಮಾಜ ಕಲ್ಯಾಣ/ ಪರಿಶಿಷ್ಠ ವರ್ಗಗಳ ಕಲ್ಯಾಣ/ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿಚೆನ್ನಮ್ಮ/ಏಕಲವ್ಯ ಮಾದರಿ/ ಅಟಲ್ ಬಿಹಾರಿ ವಾಜಪೇಯಿ/ ಇಂದಿರಾಗಾಂಧಿ/ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಅವಧಿ ವಿಸ್ತರಣೆ ಮಾಡಲಾಗಿದೆ. ಜನವರಿ 25ರೊಳಗೆ ಅರ್ಜಿ ಪಡೆದು ಹಿಂದಿರುಗಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

## ಇಂದು ವಿವೇಕಾನಂದರ ಜಯಂತಿ

ತುಮಕೂರು

ನಗರದ ಯೂನಿಯನ್ ಕ್ರಿಶ್ಚಿಯನ್ ಕಾಲೇಜು ವತಿಯಿಂದ ಜ.13 ರಂದು ಬೆಳಗ್ಗೆ 11 ಗಂಟೆಗೆ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ಸ್ವಾಮಿ ವಿವೇಕಾನಂದರ 155ನೇ ಜಯಂತಿ ಕಾರ್ಯಕ್ರಮವನ್ನು ಕಾಲೇಜಿನ ಸೆಮಿನಾಲ್ ಹಾಲ್‌ನಲ್ಲಿ ಏರ್ಪಡಿಸಲಾಗಿದೆ. ರಾ.ಸಂ. ಯೋಜನಾಧಿಕಾರಿ ಪ್ರೊ.ಸಿ.ವಿ. ರಾಜಗೋಪಾಲ್ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದು, ಮುಖ್ಯ ಅತಿಥಿಗಳಾಗಿ ಸಹ ಪ್ರಾಧ್ಯಾಪಕ ಹೆಚ್.ಎಸ್. ಪ್ರಕಾಶ್ ಆಗಮಿಸುವರು. ಅಧ್ಯಕ್ಷತೆಯನ್ನು ಪ್ರಾಂಶುಪಾಲ ಪ್ರೊ.ಪಿ.ಜೋಯಲ್ ಜಯಪ್ರಕಾಶ್ ವಹಿಸುವರು.

## ಇಂದು ಕಲ್ಯಾಣೋತ್ಸವ

ತುಮಕೂರು

ಇಲ್ಲಿನ ಎ.ಪಿ.ಎಂ.ಸಿ. ಯಾರ್ಡ್ ಎದುರಿನ ಮಹಾಲಕ್ಷ್ಮಿನಗರದ ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯದಲ್ಲಿ ಜನವರಿ 13 ರಂದು ಸಂಜೆ 6 ಗಂಟೆಗೆ ಸಾಮೂಹಿಕ ಕಲ್ಯಾಣೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.

## ಚೇತನ ವಿದ್ಯಾ ಮಂದಿರ ಶಾಲೆಗೆ ಚಿನ್ನದ ಪದಕ




ಕೊರಟಗೆರೆ

ಚೇತನ ವಿದ್ಯಾ ಮಂದಿರದ ಆಂಗ್ಲಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ 3 ಚಿನ್ನ, 4 ಬೆಳ್ಳಿ ಮತ್ತು 2 ಕಂಚಿನ ಪದಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಶಾಲೆಯ ಆಡಳಿತ ಮಂಡಳಿ ಅಧ್ಯಕ್ಷ ಎಸ್.ಮಾರುತಿ ತಿಳಿಸಿದ್ದಾರೆ. ತುಮಕೂರು ಜಿಲ್ಲಾ ಮಟ್ಟದಲ್ಲಿ ಇತ್ತೀಚೆಗೆ ಏರ್ಪಡಿಸಲಾಗಿದ್ದ ಕರಾಟೆ ಸ್ಪರ್ಧೆಯಲ್ಲಿ ಚೇತನ ವಿದ್ಯಾ ಮಂದಿರದ ಆಂಗ್ಲಮಾಧ್ಯಮ ವಿಭಾಗದ ಲಾವಣ್ಯ, ಭರತ್.ವಿ. ಆಚಾರ್ಯ ಹಾಗೂ ಎ.ತನುಶ್ರೀ ಚಿನ್ನದ ಪದಕ, ವಿ.ಜಿ.ಭುವನ್‌ಗೌಡ, ಎನ್. ತರುಣ್, ಕೆ.ಎಂ.ಮುಸ್ಕಾನ್, ಎ.ಭೀಮರಾಜು ಬೆಳ್ಳಿ ಪದಕ ಮತ್ತು ಎಂ.ಎಸ್.ಪ್ರೀಯಾ ಮತ್ತು ಪ್ರಶಾಂತ್ .ಸಿ.ಆರ್.ವೃತ್ತಿಕ್ ಕಂಚಿನ ಪದಕ ಗಳಿಸುವ ಮೂಲಕ ಶಾಲೆಗೆ ಮತ್ತು ತಾಲ್ಲೂಕಿಗೆ ಕೀರ್ತಿ ತಂದಿದ್ದಾರೆ.

ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ ಶಿಕ್ಷಕರಿಗೆ ಹಾಗೂ ಮುಖ್ಯ ಶಿಕ್ಷಕಿ ಲಕ್ಷ್ಮೀಗೌಡರಿಗೆ ಜ. 13 ರಂದು ಶಾಲಾ ಆವರಣದಲ್ಲಿ ನಡೆಯುವ 14ನೇ ವರ್ಷದ ಶಾಲಾ ವಾರ್ಷಿಕೋತ್ಸವ ಸಮ್ಮಿಲನ ಕಾರ್ಯಕ್ರಮದಲ್ಲಿ ಎಲೆರಾಂಪುರ ಕುಂಚಿಟಿಗರ ಮಠದ ಶ್ರೀ ಹನುಮಂತನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಅಭಿನಂದಿಸುವುದಾಗಿ ತಿಳಿಸಿದ್ದಾರೆ.



## ಪ್ರಜಾ ಪ್ರಗತಿ

ಎಸ್. ಸಿದ್ದಲಿಂಗಸ್ವಾಮಿ ($S^3$)
ನಿವೃತ್ತ ಮುಖ್ಯೋಪಾಧ್ಯಾಯರು
ತುಮಕೂರು, ಮೊ: 9008596396

## ಎಸ್‌ಎಸ್‌ಎಲ್‌ಸಿ ಅಭ್ಯಾಸ ಮಾರ್ಗದರ್ಶಿ

ಹಿಂದಿನ ಸಂಚಿಕೆಯಿಂದ ...

### ಗಣಿತ - ತ್ರಿಕೋನಮಿತಿ

5)




$\tan x = \frac{75}{75}\ \frac{DF}{FE}$

$= \frac{75}{75} = 1 \qquad \tan 45^0 = 1$

$\tan x = \tan 45^0$

$x = 45^0$

6) ಒಂದು ಎತ್ತರದ ಕಟ್ಟಡವು 300 m ಉದ್ದದ ನೆರಳನ್ನು ಉಂಟುಮಾಡುತ್ತದೆ ಆಗ ಸೂರ್ಯ ನೆಡೆಗೆ ಉಂಟಾದ ಕೋನ 300 ಆಗಿದ್ದರೆ ಕಟ್ಟಡದ ಎತ್ತರವೇನು?




AB = ಕಟ್ಟಡದ ಎತ್ತರ = x

BC = ನೆರಳಿನ ಉದ್ದ = 300m

$ACB = 30^0$

$\tan 30^0 = \frac{AB}{BC}$

$\tan 30^0 = \frac{x}{300}$

$x = 300 \times \tan 30^0 \qquad \tan 30^0 \frac{1}{\sqrt{3}}$

$= 300 \times \frac{1}{\sqrt{3}} \qquad \sqrt{3} \times \sqrt{3} = 3$

$= \frac{3 \times 100}{3}$

$= 100\sqrt{3}$

ಕಟ್ಟಡದ ಎತ್ತರ = $AB = X = 100\sqrt{3}$ m

7) 50 3m ಎತ್ತರದ ಕಟ್ಟಡದ ಮೇಲಿನಿಂದ ನೆಲದ ಮೇಲಿರುವ ಒಂದು ವಸ್ತುವನ್ನು ನೋಡುವಾಗ ಉಂಟಾದ ಅವನತ ಕೋನವು $45^0$ ಆಗಿದೆ. ಹಾಗಾದರೆ ಕಟ್ಟಡ ಹಾಗೂ ವಸ್ತುವಿನ ನಡುವಿನ ದೂರವನ್ನು ಕಂಡುಹಿಡಿಯಿರಿ (J2017)




AB = ಕಟ್ಟಡದ ಎತ್ತರ = $50\sqrt{3}$ m

c = ವಸ್ತು.

$D\hat{A}C$ = ಅವನತಕೋನ = 450

$\triangle ABC$ ಯಲ್ಲಿ $A\hat{C}B = D\hat{A}C = 450$ (ಪರ್ಯಾಯ ಕೋನಗಳು)

BC = ಕಟ್ಟಡದ ಹಾಗೂ ವಸ್ತುವಿನ ದೂರ = x

$\tan 45^0 = \frac{AB}{BC}$

$\tan 45^0 = \frac{50\sqrt{3}}{x}$

$x \times \tan 45^0 = 50\sqrt{3}$

$x = \frac{50\sqrt{3}}{\tan 45^0} = \frac{50\sqrt{3}}{1} \qquad \tan 45^0 = 1$

$x = 50\sqrt{3}$ m

ಕಟ್ಟಡ ಹಾಗೂ ವಸ್ತುವಿನ ದೂರ = $x = 50\sqrt{3}$m

8) ಬಿರುಗಾಳಿಗೆ ಸಿಕ್ಕಿ ಒಂದು ಮರವು ಮುರಿದು ನೆಲಕ್ಕೆತಾಗಿದಾಗ ಒಂದು ಲಂಬಕೋನ ತ್ರಿಭುಜವನ್ನು ಉಂಟುಮಾಡಿದೆ. ಹಾಗೂ ಮುರಿದು ನೆಲಕ್ಕೆ ತಾಗಿದಾಗ ನೆಲದೊಂದಿಗೆ $60^0$ ಕೋನವನ್ನು ಉಂಟುಮಾಡಿದೆ ಮತ್ತು ಮರದ ತುದಿಯು ಮರದ ಬುಡದಿಂದ (ಪಾದದಿಂದ) 20m ದೂರದಲ್ಲಿ ತಾಗಿದೆ. ಹಾಗಾದರೆ ಮುರಿದು ಬೀಳುವ ಮುನ್ನ ಮರದ ಎತ್ತರವೆಷ್ಟಿತ್ತೆಂದು ಕಂಡುಹಿಡಿಯಿರಿ.




ಮರದ ಎತ್ತರ = AB = ?

ಮರದ ಬುಡ ಮತ್ತು ತುದಿಗಳ ದೂರ=BC=20m

ABC ತ್ರಿಭುಜ ಲಂಬಕೋನ ತ್ರಿಭುಜ

$A\hat{C}B = 60^0$

ಮುರಿದು ಬೀಳುವಮುನ್ನ ಮರದ ಎತ್ತರ = AB+AC=?

$\tan 60^0 = \frac{AB}{BC}$

$\sqrt{3} = \frac{AB}{20} \qquad \tan 60^0 = \sqrt{3}$

$AB = 20\sqrt{3}$

$\cos 60^0 = \frac{BC}{AC}$

$\frac{1}{2} = \frac{20}{AC} \qquad \cos 60^0 = \frac{1}{2}$

$AC = 20 \times 2 = 40$

ಮುರಿದು ಬೀಳುವ ಮುನ್ನ ಮರದ ಎತ್ತರ = AB + AC

$= 20\sqrt{3} + 40$

$= 20(\sqrt{3} + 2)$ m

ಮುಂದುವರೆಯುವುದು...

## ಬಯಲಾಟೆಯ ಬದುಕು



110

ಈಚನೂರು ಇಸ್ಮಾಯಿಲ್ ಮೊ:8147575414

### ನನ್ನ ಮನಸ್ಸಿನಲ್ಲಿದ್ದ ಇನ್ನು ಅನೇಕ ಸಂಗತಿಗಳನ್ನು ನನ್ನ ಗೆಳೆಯನಿಗೆ ಅಂದು ಹೇಳಲಾಗಲಿಲ್ಲ

ಅಂದು ಮುಂಜಾನೆ ಒಂದು ಗಂಟೆ ವಾಕ್ ಮಾಡಿ, ದೇಹ ಮತ್ತು ಮನಸ್ಸನ್ನು ಹಗುರಮಾಡಿಕೊಂಡು ಸರಾಗವಾಗಿ ಉಸಿರು ತೆಗೆದು ಮನೆಗೆ ವಾಪಾಸ್ಸಾಗಿದ್ದೆ, ದಿನ ಪತ್ರಿಕೆಯನ್ನು ಕೈಗೆತ್ತಿಕೊಂಡು ಒಂದು ಗುಕ್ಕಿನಲ್ಲಿ ತಿರುವು ಹಾಕಿದೆ. ಹೆಚ್ಚಾಗಿ ಸಾವಿನ ಸುದ್ದಿಗಳೇ ಅಂದು ಪ್ರಕಟವಾಗಿದ್ದವು. ಸಿರಿಯಾದಲ್ಲಿ ಒಂದೇ ದಿನಕ್ಕೆ 405 ವ್ಯಕ್ತಿಗಳು ಅಸುನೀಗಿದ್ದರು. ಬಾಗ್ದಾದ್ ನಗರದಲ್ಲಿ ಅಪಘಾತದಲ್ಲಿ 15 ಜನಮರಣ, ಭಾರತದ ಒಂದು ನಗರ ಪ್ರದೇಶದಲ್ಲಿ ಪಾದಚಾರಿ ರಸ್ತೆ ದಾಟುತ್ತಿದ್ದಾಗ ದ್ವಿಚಕ್ರವಾಹನ ಅತಿವೇಗದಿಂದ ಚಲಿಸಿ ಪಾದಚಾರಿಯ ತಲೆಗೆ ಏಟು ಬಿದ್ದು ಅಸಿನೀಗಿದ್ದು, ಪಾಕಿಸ್ತಾನದಲ್ಲಿ ಮಾನವ ಬಾಂಬಿನ ಆತ್ಮಾಹುತಿ, ಧರ್ಮದ ವೈಷಮ್ಯ ವೃದ್ಧಿಯಾಗುತ್ತಿರುವುದು. ಗಂಡುಮಗು ಹೇರಲಿಲ್ಲದಿದ್ದರಿಂದ ಮಹಿಳೆ ಆತ್ಮಹತ್ಯೆ, ಬರಿ ಸಾವಿನ ಸುದ್ದಿಗಳು, ನನ್ನನ್ನು ಬಲವಾಗಿ ಅಲುಗಾಡಿಸಿದವು. ಅಂಕಣ ಬರಹದ ಕಾಲಂಗೆ ಜಿಗಿದೆ. ಅಲ್ಲಿ ದೊರೆಯುವ ಒಂದು ಗಟ್ಟಿಸಾಲಿಗೆ ಹುಡುಕಾಡಿದೆ. ಕ್ರೀಡೆಯಲ್ಲಿ ಸುದ್ದಿಯಾಗುವ ಸಂಗತಿಗಳಿಗೆ ಹಸಿರಾದೆ. ವ್ಯಕ್ತಿತ್ವ ವಿಕಸನದ ಅಭಿವ್ಯಕ್ತಿಗೆ ನಾನು ರೂಪಾಂತರಗೊಳ್ಳುತ್ತೇನೆ. ಹಾಗಾಗಿ ದಿನಕ್ಕೆ ನಾಲ್ಕಾರು ದಿನ ಪತ್ರಿಕೆಗಳನ್ನು ಗಂಭೀರವಾಗಿ ಓದುತ್ತೇನೆ. ದಿನೇಶ್ ಅಮೀನ್‌ಮಟ್ಟು, ಶಿವಪ್ರಕಾಶ್, ಬರಗೂರು, ಉಮಾಪತಿ, ನಾಗೇಶ್ ಹೆಗ್ಡೆ, ಪುರುಷೋತ್ತಮ್ ಬಿಳಿಮಲೆ, ನಯ್ಯರ್, ರಶೀದ್, ಗುಹಾರವರ ಅಂಕಣ ಬರಹಗಳು ಮನಸ್ಸಿಗೆ, ಮುದ ನೀಡಿದ್ದವು. ನನ್ನ ಸೃಜನಶೀಲತೆಯ ತಾಯ್ತನಕ್ಕೆ ಧ್ಯಾನಸ್ಥ, ಓದಿಗೆ ನನ್ನ ದೇಹ ಚಡಪಡಿಸುತ್ತಿತ್ತು. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಸಂಗತಿಗಳನ್ನು ವರ್ತಮಾನದಲ್ಲಿ ಅನುಸಂಧಾನ ಮಾಡಲು ತವಕಿಸುತ್ತಿವೆ. ನನ್ನ ಈ ಓದಿನ ಕಾರ್ಯಕ್ಕೆ ದೂರವಾಣಿ ಕಡಿವಾಣ ಹಾಕಿತು. ಜೀವದ ಗೆಳೆಯ ದೂರವಾಣಿ ಮಾಡಿದ್ದ, ಅವನ ಧ್ವನಿ ಸಂತೋಷದ ಲಹರಿಯಲ್ಲಿ ನರ್ತಿಸುತ್ತಿತ್ತು. ಗೆಳೆಯ ಸಂತೋಷದಿಂದ ಫೋನ್ ಮಾಡಿದ್ದು, ನನಗೂ ಸಂತೋಷವಾಯ್ತು. ಸಂತೋಷದ ಕಾರಣಕ್ಕೆ, ನಾನು ಕುತೂಹಲನಾಗಿದ್ದೆ. ಬೇಗ ಹೊರಟು ಆಸ್ಪತ್ರೆಗೆ ಬಾ ಎಂದು ಕಟ್ ಮಾಡಿದ. ಆಸ್ಪತ್ರೆಯಿಂದ ಕರೆಮಾಡಿದ್ದು, ಖಾತ್ರಿಯಾಗಿ ಆಸ್ಪತ್ರೆಗೆ ಹೋದೆ. ಅದೊಂದು ನಗರದಲ್ಲಿರುವ ಪ್ರಖ್ಯಾತ ಹೆರಿಗೆ ಆಸ್ಪತ್ರೆ. ಆಧುನಿಕ ಕಟ್ಟಡದಲ್ಲಿ ತಂತ್ರಜ್ಞಾನ, ಬಳಸಿಕೊಂಡು ಆರೋಗ್ಯ ನೀಡುವ ಈ ಆಸ್ಪತ್ರೆಯನ್ನು ಅಂಜಿಕೆಯಿಂದಲೇ ಹೊಕ್ಕೆ. ಏಕೆಂದರೆ ನನಗೆ ಆಸ್ಪತ್ರೆಯೆಂದರೆ ಹೆದರಿಕೆಯಿದೆ. ನಾಲ್ಕು ಹೆರಿಗೆಗಳನ್ನು ನೋಡಿದ್ದೇನೆ, ಚೀರಾಟ ಚಿತ್ಕಾರದೊಂದಿಗೆ ಮಗುವಿನ ಕಿಲಕಿಲ ನಗು, ರಕ್ತದ ಕೋಡಿ ಎಲ್ಲವು ನನ್ನನ್ನು ಅಲುಗಾಡಿಸಿದೆ. ಒಂದು ಹೆರಿಗೆಯನ್ನು ನೋಡಿದ ವ್ಯಕ್ತಿ ಇನ್ನ್ಯಾವತ್ತೂ ಮಹಿಳೆಯ ಮೇಲೆ ಕೈಮಾಡುವುದಿಲ್ಲ.(ನಿಜವಾದ ಮನುಷ್ಯನಾಗಿದ್ದರೆ) ಒಂದು ವೇಳೆ ಅದನ್ನು ನೋಡಿಯೂ ಮಹಿಳೆಯ ಮೇಲೆ ಕೈಮಾಡಿದರೆ ಅವನನ್ನು ಮನುಷ್ಯ ಜಾತಿಯಿಂದ ಹೊರಗಿಡಬೇಕಾಗುತ್ತದೆ? ನನ್ನನ್ನು ನೋಡಿದ ಗೆಳೆಯ ಹಿಗ್ಗಿ ಹಿಗ್ಗಿ ಹೀರೇಕಾಯಿಯಾದ. ನನ್ನ ಬಾಯಿಗೆ ಸಿಹಿ ಹಾಕಿ, ನನ್ನ ಹೆಂಡ್ತಿ ಗಂಡು ಮಗುವಿಗೆ ಜನ್ಮನೀಡಿದ್ದಾಳೆ. ನನಗೆ ನನ್ನ ಮನೆಯ ವಾರಸುದಾರ ಸಿಕ್ಕನೆಂದು ಖುಷಿಯಿಂದ ಹೇಳುತ್ತಿದ್ದ. ನಾನು ಅವಾಕ್ಕಾದೆ, ದಿಘ್ಭ್ರೂಢನಾದೆ,! ಗಂಡು ಮಗು ಪಡೆದಿದ್ದಕ್ಕೆ, ಈ ಪರಿಯ ಸಂತೋಷ ಅವನ ಬ್ಯಾಂಕ್ ಖಾತೆಯಲ್ಲಿ ಒಂದು ಕೋಟಿ ರೂಪಾಯಿ ಜಮಾಮಾಡಿದಂತೆ ಅವನ ಸಂತೋಷ ಮುಗಿಲಿಗೇರಿತ್ತು. ನಾನು ಮಾತನಾಡದೆ ನಿಂತಿದ್ದೆ. ಊರಿಂದ ಸ್ನೇಹಿತರು ಬಂದು ಬಳಗದವರು ಆಸ್ಪತ್ರೆಗೆ ಬಂದಿದ್ದರು. ಮಗೂಗೆ ಹೆಸರಿಡಬೇಕೆಂದು ಪಂಚಾಂಗದವರನ್ನು ಕರೆಸಿದ್ದ. ಗೆಳೆಯನ ಈ ಪರಿ ನೋಡಿ ನಾನು ಏನೂ ಹೇಳಲಿಲ್ಲ, ಆದರೆ ಅಲ್ಲಿದ್ದ ಅವರು ಮೂರು ಜನ ಹೆಣ್ಣು ಮಕ್ಕಳನ್ನು ಕಂಡು ನಾನು ಚಕಿತನಾದೆ, ಮೂರು ಹೆಣ್ಣುಮಕ್ಕಳಾದ ಮೇಲೆ ಈ ಗಂಡು ಮಗುವಿನ ಆಗಮನ ಈ ಮೂರು ಹೆಣ್ಣುಮಕ್ಕಳು ಸಿಡಿಲು ಬಡಿದಂತೆ ನಿಂತಿದ್ದವು. ನಾವು ಈ ಪ್ರಪಂಚಕ್ಕೆ ಆಗಮನವಾದಾಗ ಈ ಅಪ್ಪ ರೀತಿ ಸಂಭ್ರಮಿಸಿರಲಿಲ್ಲ! ಈಗ ಈ ಸಂಭ್ರಮ ನಮ್ಮನ್ನು ಚುಚ್ಚುತ್ತಿದೆಯೆಂದು ಅವರ ಮುಖಗಳು ಕೆಂಡಾಮಂಡಲವಾಗಿದ್ದವು. ಆ ಆರು ಕಣ್ಣುಗಳು ಪ್ರಜ್ವಲಿಸುತ್ತಿದ್ದ, ದೃಷ್ಠಿಗೆ ಪ್ರಳಯ ಕೂಡ ಆಹುತಿಯಾಗಬೇಕು. ಸುನಾಮಿ ಕೂಡ ವಿಸರ್ಜನೆಯಾಗಬಹುದು.

ಮುಂದುವರೆಯುತ್ತದೆ

## ನಗರದಲ್ಲಿಂದು

- ಬೆಳಿಗ್ಗೆ 9.30 ಗಂಟೆಗೆ ವೀರಸಾಗರ ಬಡಾವಣೆಯ ಮೆಳೆಕೋಟೆ-ಗಂಗಸಂದ್ರ ರಸ್ತೆಯ ವಿಕಾಸ ಭಾರತಿ ಆವರಣದಲ್ಲಿ ವಾರ್ಷಿಕ ಹಬ್ಬ. ಅಧ್ಯಕ್ಷತೆ: ಬೆಂಗಳೂರು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ. ಮುಖ್ಯ ಅತಿಥಿ: ಬಾಪೂಜಿ ವಿದ್ಯಾ ಸಂಸ್ಥೆ ಸಂಸ್ಥಾಪಕ ಕಾರ್ಯದರ್ಶಿ ಎಂ.ಬಸವಯ್ಯ. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಪ್ರದಾನ ಕಾರ್ಯದರ್ಶಿ ಡಾ.ವುಡೇ ಪಿ.ಕೃಷ್ಣ.
- ಬೆಳಿಗ್ಗೆ 10.30 ಗಂಟೆಗೆ ಮಂಜುನಾಥ ನಗರದ 80 ಅಡಿ ರಸ್ತೆಯ ಕಿಡ್ಸ್ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಶಾಲಾ ವಾರ್ಷಿಕೋತ್ಸವ.ಅಧ್ಯಕ್ಷತೆ: ತುಮಕೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಡಾ.ಪಿ.ಎಸ್.ಪರಮಶಿವಯ್ಯ. ಉದ್ಘಾಟನೆ: ಮಾಜಿ ಸಂಸದ ಜಿ.ಎಸ್. ಬಸವರಾಜು.
- ಸಂಜೆ 5 ಗಂಟೆಗೆ ಚಿಕ್ಕಪೇಟೆ ಗಾರ್ಡನ್ ರಸ್ತೆಯ ವಾಸವಿ ವಿದ್ಯಾಪೀಠದ ಶಾಲಾ ಆವರಣದಲ್ಲಿ ವಾರ್ಷಿಕ ದಿನಾಚರಣೆ. ಉದ್ಘಾಟನೆ: ಹಿರೇಮಠದ ಡಾ.ಶ್ರೀ ಶಿವಾನಂದ ಶಿವಾಚಾರ್ಯಸ್ವಾಮಿಗಳು ಅಧ್ಯಕ್ಷತೆ: ವಾಸವಿ ವಿದ್ಯಾಪೀಠದ ಅಧ್ಯಕ್ಷ ಸಿ.ಎ. ಸೋಮೇಶ್ವರಗುಪ್ತ.
- ಸಂಜೆ 6.30 ಗಂಟೆಗೆ ಎಸ್.ಎಸ್.ಪುರಂ ಒಂದನೇ ತಿರುವಿನ ಶ್ರೀ ಕನ್ನಿಕಾಪರಮೇಶ್ವರಿ ದೇವಾಲಯದಲ್ಲಿ ಹುಬ್ಬಳ್ಳಿಯ ಶ್ರೀ ಹರಿ ಆಚಾರ್ಯ ವಾಳ್ವೇಕರ್ ರವರಿಂದ ಶ್ರೀಮತ್ ಭಾಗವತ್ ಸಪ್ತಾಹ ಕುರಿತು ಉಪನ್ಯಾಸ.

## ಜಿಲ್ಲೆಯಲ್ಲಿಂದು

- ಬೆಳಿಗ್ಗೆ 9 ಗಂಟೆಗೆ ತುಮಕೂರು ತಾಲ್ಲೂಕು ಗೂಳೂರು ಹೋಬಳಿ ಹೊನ್ನುಡಿಕೆಯ ಶ್ರೀ ಸ್ವರ್ಣಾಂಭ ಪ್ರೌಢಶಾಲೆಯಲ್ಲಿ ಸಾಹಿತ್ಯ ಸೌರಭ ಕಾರ್ಯಕ್ರಮ. ಉದ್ಘಾಟನೆ: ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಬಿ.ಸಿ.ಶೈಲಾನಾಗರಾಜ್, ಅಧ್ಯಕ್ಷತೆ: ಗೂಳೂರು ಹೋಬಳಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಟಿ.ಎಂ.ಗರುಡಯ್ಯ.
- ಮಧುಗಿರಿ ತಾಲ್ಲೂಕು ಮಿಡಿಗೇಶಿ ಹೋಬಳಿ ಹೊಸಕೆರೆ ಗೊಲ್ಲರಹಟ್ಟಿಯ ಶ್ರೀ ರಂಗನಾಥಸ್ವಾಮಿ ದೇವಾಲಯದಲ್ಲಿ ಮರುಪೂಜೆ.ಹಾಗೂ ಶ್ರೀ ಸ್ವಾಮಿಯ ಉತ್ಸವ.

## ಅಗಳಕುಪ್ಪೆಯಲ್ಲಿ ಲಕ್ಷದೀಪೋತ್ಸವ

ತುಮಕೂರು

ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿ ಅಗಳಕುಪ್ಪೆಯಲ್ಲಿ ಜನವರಿ 13 ರಿಂದ 15 ರವರೆಗೆ ಅಗಳಕುಪ್ಪೆ ಗ್ರಾಮದ ಶ್ರೀ ಕುಮಟ ರಾಮಸ್ವಾಮಿ ಹಾಗೂ ತುಮಕೂರು ತಾಲ್ಲೂಕು ಗೂಳೂರು ಹೋಬಳಿಯ ದೊಡ್ಡಸಾರಂಗಿಯ ಶ್ರೀ ಲಕ್ಷ್ಮಿದೇವಿ ಅಮ್ಮನವರ 3ನೇ ವರ್ಷದ ಅದ್ದೂರಿ ಲಕ್ಷದೀಪೋತ್ಸವ ಹಾಗೂ ಹೂವಿನ ಪಲ್ಲಕ್ಕಿ ಉತ್ಸವ ಜರುಗಲಿದೆ.

ಈ ಕಾರ್ಯಕ್ರಮದ ಅಂಗವಾಗಿ ಜನವರಿ 13 ರಂದು ಅಗಳಕುಪ್ಪೆಯ ಶ್ರೀ ಗವಿರಂಗನಾಥಸ್ವಾಮಿ ದೇವಾಲಯದಲ್ಲಿ ರಾತ್ರಿ ಅಖಂಡ ಭಜನೆ, ಸಂಜೆ 7.30 ಗಂಟೆಗೆ ದೊಡ್ಡಸಾರಂಗಿಯ ಶ್ರೀ ಲಕ್ಷ್ಮೀದೇವಿ ಅಮ್ಮನವರು ಅಗಳಕುಪ್ಪೆ ಗ್ರಾಮಕ್ಕೆ ಆಗಮನ, ಜನವರಿ 14 ರಂದು ಸಂಜೆ 6.30 ಗಂಟೆಗೆ ಲಕ್ಷದೀಪೋತ್ಸವ ಸಂಜೆ 7 ಗಂಟೆಗೆ ಅನ್ನಸಂತರ್ಪಣೆ, ಸಂಜೆ 7.30 ಗಂಟೆಗೆ ಶ್ರೀ ಕುಮಟ ರಾಮದೇವರು ಹಾಗೂ ಶ್ರೀ ಲಕ್ಷ್ಮೀದೇವಿಯವರನ್ನು ತಮಟೆವಾದ್ಯ, ವೀರಗಾಸೆ ಕುಣಿತ, ಹಾಗೂ ನಾಸಿಕ್ ಡೋಲ್ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಗ್ರಾಮದ ಬೀದಿಗಳಲ್ಲಿ ಮೆರವಣಿಗೆ, ಜನವರಿ 15 ರಂದು ಬೆಳಿಗ್ಗೆ ಪೂಜೆ ಹಾಗೂ ಮದ್ಯಾಹ್ನ 12 ಗಂಟೆಗೆ ಅನ್ನದಾನ, ಸಂಜೆ 5 ಗಂಟೆಗೆ ಶ್ರೀ ಲಕ್ಷ್ಮೀ ದೇವಿಯ ಬೀಳ್ಕೊಡುಗೆ ಕಾರ್ಯಕ್ರಮ ಜರುಗಲಿದೆ.